factories, movement of people convenience and imbalance in the administration, ಈ ಮೂರು ವಿಚಾರಗಳನ್ನು ಸರ್ಕಾರದವರು ಗಮನದಲ್ಲಿಟ್ಟುಕೊಂಡು ಮಾಡಿದೆಯೇ ವಿನಃ ಬೇರೆ ಯಾವುದೇ ಕಾರಣದಿಂದ ಮಾಡಿರುವುದಿಲ್ಲ. ಕೆನ್‌ವೀನಿಯನ್ಸ್, ಕಮ್ಯುನಿಕೇಷನ್ ಮತ್ತು ಇನ್‌ಬ್ಯಾಲೆನ್ಸ್ ಬಗ್ಗೆ ಸರ್ಕಾರದ ಒಂದು ಕಮಿಟ್‌ಮೆಂಟ್ ಇದೆ, ಅದು ಏನೆಂದರೆ, ಇನ್‌ಬ್ಯಾಲೆನ್ಸ್ ಯಾವ ಯಾವ ಏರಿಯಾಗಳಲ್ಲಿ ತೆಗೆಯಲಿಕ್ಕೆ ಆಗುತ್ತದೆಯೋ, ಉತ್ತರ ಕರ್ನಾಟಕ ಭಾಗದ ಜನರಿಗೆ ಸಹಾಯವನ್ನು ಮಾಡುವುದಕ್ಕಾಗಿ ಆದ್ಯತೆಯನ್ನು ಮಾಡುತ್ತೇವೆ, ಅದಕ್ಕೆ ನಾವು ತಾತ್ವಿಕವಾಗಿ ಬದ್ಧರಾಗಿದ್ದೇವೆ. ಈ ಒಂದು ವಿಚಾರದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಕಳೆದ ವರ್ಷ ಬಜೆಟ್‌ನ ಸಂದರ್ಭದಲ್ಲಿ ಈ ಸದನದಲ್ಲಿ ಆಶ್ವಾಸನೆಯನ್ನು ಕೊಟ್ಟಿದ್ದರು, ಆ ಭಾಗದ ರೈತಾಪಿ ಜನರಿಗೆ ಮತ್ತು ಜನಪ್ರತಿನಿಧಿಗಳಿಗೆ ಭರವಸೆಯನ್ನು ಕೊಟ್ಟಿದ್ದರು. ಅದರಂತೆ ಅದನ್ನು ನಾವು ಜಾರಿಗೆ ತಂದಿದ್ದೇವೆ. ಈಗ ಅಸಮತೋಲನವನ್ನು ತೆಗೆಯುವಂತಹ ದಿಕ್ಕಿನಲ್ಲಿ ಇದು ಒಂದು ಸಣ್ಣ ಪ್ರಯತ್ನವು ಸರ್ಕಾರದ ಕಡೆಯಿಂದ ನಡೆದಿದೆ. ಮಂಡ್ಯ ಪ್ರದೇಶದಲ್ಲಿರುವಂತಹ ಮಾನ್ಯ ಸದಸ್ಯರು ಹಾಗೂ ಜಯಪ್ರಕಾಶಹೆಗಡೆಯವರು ಸೇರಿ ರೀಜನಲ್ ಆಫೀಸಿನ ವಿಚಾರದಲ್ಲಿ ಒಂದು ಸಲಹೆಯನ್ನು ಕೊಟ್ಟಿದ್ದಾರೆ. ರೀಜನಲ್ ಆಫೀಸ್‌ನ್ನು ಬೆಂಗಳೂರಿನಲ್ಲಿ ಹಾಕಬೇಕೆನ್ನುವ ಪ್ರಸ್ತಾವನೆಯನ್ನು ಈಗಾಗಲೇ ಆರ್ಥಿಕ ಇಲಾಖೆಗೆ ನಾವು ಕೊಟ್ಟಿದ್ದೇವೆ. ಬಹುಶಃ ಆ ಕಛೇರಿಯನ್ನು ತೆರೆದು ಅದರ ಆಗುಹೋಗುಗಳನ್ನು, ಸಾಧಕಬಾಧಕಗಳ ಬಗ್ಗೆ ವಿಚಾರವನ್ನು ಮಾಡಿ ಆ ಅನುಭವದ ಆಧಾರದ ಮೇಲೆ ಮುಂದೆ ಪುನರ್‌ವಿಮರ್ಶೆ ಮಾಡುವಂತಹ ಅವಶ್ಯಕತೆ ಕಂಡುಬಂದರೆ ಅದನ್ನು ಮಾಡುತ್ತೇವೆ. ಅದರ ಜೊತೆಗೆ ಶುಗರ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ಆತ್ಮಾನಂದರವರು ಪ್ರಸ್ತಾಪ ಮಾಡಿದ್ದಾರೆ. ಸರ್ಕಾರ ಆ ಬಗ್ಗೆ ಬದ್ಧತೆಯನ್ನು ಇಟ್ಟುಕೊಂಡಿದೆ. ಅದಷ್ಟುಬೇಗ ಬೆಳಗಾವಿಯಲ್ಲಿ ಶುಗರ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನ್ನು ತೆರೆದಿದ್ದೇವೆ, ಅದೇ ಪ್ರಕಾರ ಮಂಡ್ಯದಲ್ಲೂ ಕೊಡುವುದಕ್ಕೆ ಸರ್ಕಾರ ತನ್ನ ಬದ್ಧತೆಯನ್ನು ಇಟ್ಟುಕೊಂಡಿದೆ ಎನ್ನುವ ವಿಚಾರವನ್ನು ತಮ್ಮ ಮುಖೇನ ಮಾನ್ಯ ಸದಸ್ಯರಿಗೆ ತಿಳಿಸುತ್ತಿದ್ದೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಮಾನ್ಯ ಛೇರ್ಮನ್‌ರವರೆ, ಒಂದು ಪ್ರದೇಶದ ಇಂಬ್ಯಾಲೆನ್ಸ್‌ನ್ನು ಸರಿ ಮಾಡಲಿಕ್ಕೆ ಒಂದು ನಿರ್ದೇಶನಾಲಯ ಹೋಗಿ ಸರಿಯಾಗುವುದಾದರೆ ನಮ್ಮದೇನೂ ಅಭ್ಯಂತರವಿಲ್ಲ. ಅಲ್ಲಿ ಅಭಿವೃದ್ಧಿಗೆ ಹಣವನ್ನು ಬೇಕಾದರೆ ಕೊಡಲಿ, ಪ್ರಾಯಶಃ ಡೈರಕ್ಟರೇಟ್‌ನ್ನು ತೆಗೆದುಕೊಂಡು ಹೋಗಿ ಬೆಳಗಾಂ ಪ್ರದೇಶವನ್ನು ಸರಿಪಡಿಸುತ್ತೇವೆಂದು ಹೇಳಿದರೆ ಅದು ಸತ್ಯಕ್ಕೆ ದೂರವಾದುದು ಎಂಬುದು ನನ್ನ ಅಭಿಪ್ರಾಯವಾಗಿದೆ.

(ಆ) ಗುಲ್ಬರ್ಗಾ ಜಿಲ್ಲೆಯ ಸೇಡಂ ನಗರಸಭೆಯಲ್ಲಿ ನಡೆದಿರುವ ಅವ್ಯವಹಾರಗಳ ಬಗ್ಗೆ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಛೇರ್ಮನ್‌ರವರೆ, ಗುಲ್ಬರ್ಗಾ ಜಿಲ್ಲೆಯ ಸೇಡಂ ಪುರಸಭೆಯಲ್ಲಿ 10ನೇ ಹಣಕಾಸಿನ ಕಾಮಗಾರಿಗಳಲ್ಲಿ ಇನ್ನಿತರ ಹಣದಲ್ಲಿ ಅಧ್ಯಕ್ಷರು ಹಾಗೂ ಪುರಸಭೆಯ ಮುಖ್ಯಾಧಿಕಾರಿಗಳು ಸೇರಿಕೊಂಡು ಅವ್ಯವಹಾರ ಮಾಡಿರುವ

ಬಗ್ಗೆ ವಿಚಾರಣೆಯಾಗಿ ಆದು ಸಾಬೀತಾದ ನಂತರವೂ ಸಹ ಇವರ ಮೇಲೆ ಕೈಗೊಂಡಿರುವ ಕ್ರಮದ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ.

+ ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಪುರಸಭೆ, ಪಟ್ಟಣ ಪಂಚಾಯಿತಿ, ನಗರಸಭೆ ರಾಜ್ಯ ಸಚಿವರು) : ಮಾನ್ಯ ಛೇರ್ಮನ್‌ರವರೆ, ಗುಲ್ಬರ್ಗಾ ಜಿಲ್ಲೆಯ ಸೇಡಂ ಪುರಸಭೆ ವ್ಯಾಪ್ತಿಯಲ್ಲಿ 10ನೇ ಹಣಕಾಸು ಯೋಜನೆಯಡಿಯಲ್ಲಿ ಕಾಮಗಾರಿಗಳ ಅಂದಾಜು ಪಟ್ಟಿಯನ್ನು ತಯಾರಿಸಿ, ತಾಂತ್ರಿಕ ಮಂಜೂರಾತಿ ಪಡೆದು ಕೆಲಸಗಳನ್ನು ಮಾಡಲಾಗುತ್ತಿದೆ. ಜಿಲ್ಲಾಧಿಕಾರಿಗಳಿಂದ ಮಂಜೂರಾದ ಕಾಮಗಾರಿಗಳ ಹೊರತು, ಬೇರೆ ಯಾವ ಕಾಮಗಾರಿಗಳನ್ನೂ ಈ ಯೋಜನೆಯಡಿಯಲ್ಲಿ ತೆಗೆದುಕೊಂಡಿಲ್ಲ.

ಸೇಡಂ ಪುರಸಭೆಯ 11ನೇ ಹಣಕಾಸು ಯೋಜನೆಯಲ್ಲಿ ಒಟ್ಟು ರೂ.52,83,302 ಗಳು ಬಿಡುಗಡೆಯಾಗಿರುತ್ತದೆ. 30 ಕಾಮಗಾರಿಗಳ ಅಂದಾಜು ಪಟ್ಟಿಗಳನ್ನು ತಯಾರಿಸಿ ಅವುಗಳಲ್ಲಿ 9 ಕಾಮಗಾರಿಗಳಿಗೆ ತಾಂತ್ರಿಕ ಹಾಗೂ ಆರ್ಥಿಕತಾತ್ಪರ್ಯ ಮಂಜೂರಾತಿಯನ್ನು ಪಡೆದು ಕಾಮಗಾರಿಯನ್ನು ಕೈಗೊಂಡಿದ್ದು, ಅವುಗಳಲ್ಲಿ 7 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಇನ್ನುಳಿದ 2 ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ಸದರಿ ಕಾಮಗಾರಿಗಳ ವಿವರ ಈ ಕೆಳಕಂಡಂತಿದೆ.

1) ಶಾಪಿಂಗ್ ಕಾಂಪ್ಲೆಕ್ಸ್ 10 ಅಂಗಡಿ ರೈಲ್ವೆ ಸ್ಟೇಷನ್ ಕಾಂಪೌಂಡ್ ಗೋಡೆ ಹತ್ತಿರ

2) ತರಕಾರಿ ಮಾರುಟ್ಟೆ ನಿರ್ಮಾಣ

3) ಶಾಪಿಂಗ್ ಕಾಂಪ್ಲೆಕ್ಸ್ ಪುರಸಭೆ ಆವರಣ

4) ಶಾಪಿಂಗ್ ಕಾಂಪ್ಲೆಕ್ಸ್

5) ಅಬ್ದುಲ್ ಸಾಬ್ ಮನೆಯಿಂದ ಬಟಗೇರಾ ಸೊಸೈಟಿಯವರೆಗೆ ಸಿ.ಸಿ. ರಸ್ತೆ ನಿರ್ಮಾಣ ಶ್ರೀಮತಿ ನಸೀಮಾ ಬೇಗಂ ರವರ ಮನೆ ಹತ್ತಿರ ಪಕ್ಕದಲ್ಲಿ ಕೊರಿವಾಡ

6) ಕೆ.ಇ.ಬಿ. ಕಾಲೋನಿಯಲ್ಲಿ ಒಳಚರಂಡಿ ನಿರ್ಮಾಣ ಕೆಲಸ ಮತ್ತು ಮೆಟಲಿಂಗ್

7) ಶ್ರೀ ವಿವೇಕಾನಂದ ಶಾಲೆಯಿಂದ ಹಾಗೂ ನೀರಿನ ಸಮಸ್ಯೆ ಎದುರಿಸುತ್ತಿರುವ ಹೊಸದಾಗಿ ನಿರ್ಮಿತವಾದ ಕಾಲೋನಿಗಳಲ್ಲಿ ಪೈಪ್‌ಲೈನ್ ಹೆಚ್ಚಿಸಿ ಹಾಕುವುದು

8) ಸ್ಲಾಟರ್ ಹೌಸ್

9) ಐ.ಬಿ. ಯಿಂದ ಓವರ್ ಬ್ರಿಡ್ಜ್ ವರೆಗೆ ಸಿ.ಸಿ. ರಸ್ತೆ ನಿರ್ಮಾಣ.

9 ಕಾಮಗಾರಿಗಳ ಅಂದಾಜು ಮೊತ್ತ ರೂ.19,10,000 ಗಳಾಗುತ್ತದೆ. ಅವುಗಳಲ್ಲಿ 7 ಕಾಮಗಾರಿಗಳು ಪೂರ್ಣಗೊಂಡಿದ್ದು, ಒಟ್ಟು ರೂ.13,65,115 ವಿರ್ಚಾಗಿರುತ್ತದೆ. ಉಳಿದ 2 ಕಾಮಗಾರಿಗಳು ಪ್ರಗತಿಯಲ್ಲಿದ್ದು, ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.5,44,885 ಗಳಿರುತ್ತದೆ.

10ನೇ ಹಣಕಾಸು ಯೋಜನೆಯಡಿಯಲ್ಲಿ ಬಂದ ಅನುದಾನ	ರೂ. 52,83,302-00
ಇಲ್ಲಿಯವರೆಗೆ ಖರ್ಚಾಗಿರುವ ಹಣ	ರೂ. 19,10,000-00
ಉಳಿದ ಹಣ	ರೂ. 33,73,302-00

ಉಳಿದ ಹಣವನ್ನು ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್, ಸೇಡಂ ಬ್ಯಾಂಕ್‌ನಲ್ಲಿ ಇಡಲಾಗಿದೆ.

ಇನ್ನುಳಿದ 21 ಕಾಮಗಾರಿಗಳಿಗೆ ಸಂಬಂಧಿಸಿದಂತೆ, ಸೇಡಂ ಪುರ ಸಭೆಯು ಅಂದಾಜು ಪಟ್ಟಿಯನ್ನು ತಯಾರಿಸಿ ಜಿಲ್ಲಾಧಿಕಾರಿಗಳು, ಗುಲ್ಬರ್ಗಾ ಇವರಿಂದ ಆಡಳಿತಾತ್ಮಕ ಮಂಜೂರಾತಿಯನ್ನು ಪಡೆಯಲಾಗಿರುತ್ತದೆ. ಸದರಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ತಾಂತ್ರಿಕ ಮಂಜೂರಾತಿಗಾಗಿ ಕಳುಹಿಸಿಕೊಟ್ಟಿದ್ದು, ಮಂಜೂರಾತಿ ಪಡೆದ ನಂತರ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು.

ಸೇಡಂ ಕ್ಷೇತ್ರದ ಶಾಸಕರು ಕಳೆದ ಅಧಿವೇಶನದಲ್ಲಿ ಕೇಳಿರುವ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 3492 ರಲ್ಲಿ ಸೇಡಂ ಪುರಸಭೆಯಲ್ಲಿನ ಅವ್ಯವಹಾರದ ಬಗ್ಗೆ ತನಿಖೆ ನಡೆಸಲು ಪೌರಾಡಳಿತ ನಿರ್ದೇಶನಾಲಯದ ಜಂಟಿ ನಿರ್ದೇಶಕರನ್ನು ನೇಮಿಸಿ, ಅಧಿವೇಶನ ಮುಗಿದ ನಂತರ ತಪಾಸಣೆ ಮಾಡಿ ಸದರಿಯವರು ಸಲ್ಲಿಸುವ ವರದಿಯ ಮೇಲೆ ಕ್ರಮ ಕೈಗೊಳ್ಳುವುದಾಗಿ ಮಧ್ಯಂತರ ಉತ್ತರ ನೀಡಲಾಗಿತ್ತು.

ಅಧಿವೇಶನ ಮುಗಿದ ನಂತರ ಪೌರಾಡಳಿತ ನಿರ್ದೇಶನಾಲಯದ ಜಂಟಿ ನಿರ್ದೇಶಕರು ದಿನಾಂಕ: 21-6-2000 ರಂದು ಸೇಡಂ ಪುರಸಭೆಗೆ ಭೇಟಿ ನೀಡಿ ಅವ್ಯವಹಾರಗಳ ಬಗ್ಗೆ ತನಿಖೆ ನಡೆಸಿ ಸಲ್ಲಿಸಿದ ವರದಿಯನ್ನು ಸರ್ಕಾರವು ಪರಿಶೀಲಿಸಿ, ದಿನಾಂಕ: 9-11-2000ದ ಪತ್ರದಲ್ಲಿ ಸೇಡಂ ಪುಸರಭೆಯ ಹಿಂದಿನ ಮುಖ್ಯಾಧಿಕಾರಿ ಶ್ರೀ ಹನುಮಾ ನಾಯಕ್ ರವರ ಮೇಲೆ 1957ರ ಕೆ.ಸಿ.ಎಸ್. (ಸಿಸಿಎ) ನಿಯಮಾವಳಿ ನಿಯಮ 11 ರನ್ವಯ ಶಿಸ್ತಿನ ಕ್ರಮ ಜರುಗಿಸುವಂತೆ ನಿರ್ದೇಶನ ನೀಡಲಾಗಿತ್ತು. ಅದರಂತೆ ಸದರಿಯವರ ವಿರುದ್ಧದ ಆರೋಪಗಳ ಕುರಿತಂತೆ ವಿಚಾರಣೆ ನಡೆಸಲು ಗುಲ್ಬರ್ಗಾ ಉಪವಿಭಾಗಾಧಿಕಾರಿಗಳನ್ನು ವಿಚಾರಣಾಧಿಕಾರಿ ಗಳನ್ನಾಗಿ ನೇಮಕ ಮಾಡಿ ವಿಚಾರಣೆ ನಡೆಸಲಾಗುತ್ತಿದೆ.

+ ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ: ಪೌರಾಡಳಿತ ಇಲಾಖೆಯವರು ಸೇಡಂ ಪುರಸಭೆಯಲ್ಲಿ ಒಂದು ರಸ್ತೆಗೆ 50 ಲಕ್ಷ ರೂಪಾಯಿಗಳ ಅಂದಾಜು ಪತ್ರ ಆಗುವುದನ್ನು ಪುರಸಭೆಯ ಅಧ್ಯಕ್ಷರು ತಮ್ಮ ಇಲಾಖೆಯ ಇಂಜಿನಿಯರುಗಳಿಂದ ಒಂದೆರಡು ಲಕ್ಷ ರೂಪಾಯಿಗಳ ಒಳಗೆ ಎಸ್ಟಿಮೇಟ್‌ನ್ನು ಮಾಡಿಸಿ, ಟೆಂಡರ್ ಇಲ್ಲದೆ ಸುಮಾರು 20 ರಿಂದ 30 ಲಕ್ಷ ರೂಪಾಯಿಗಳ ಕೆಲಸವನ್ನು ತುಂಡು ಗುತ್ತಿಗೆಯ ಆಧಾರದ ಮೇಲೆ ತಾವೇ ಯಾರೋ ಒಬ್ಬ ಹೆಸರಿನಲ್ಲಿ ಮಾಡಿ ಅವ್ಯವಹಾರವನ್ನು ಮಾಡಿದ್ದು ಇಂಜಿನಿಯರ್‌ಗಳ ಮುಖಾಂತರ ವಿಚಾರಣೆಯನ್ನು ಮಾಡಿಸಲು ನಾವು ಕೋರಿದರೆ, ಆ ವಿಚಾರಣೆಯನ್ನು ಮಾಡಿರುವುದಿಲ್ಲ. ಆ ಇಂಜಿನಿಯರ್‌ಗಳು ಹೋಗಿ ನೋಡಿದರೆ ಸಿಮೆಂಟ್ ಕಾಂಕ್ರೀಟ್ ಮಾಡುವ ವೇಳೆಯಲ್ಲಿ ಮೊದಲು ಕಾಂಕ್ರೀಟ್, ಮೆಟಲ್ ರೂಲಿಂಗ್ ಮಾಡಿ ಮೇಲೆ ಸೀಮೆಂಟ್ ಕಾಂಕ್ರೀಟ್ ನಾಲ್ಕು ಇಂಚು ಹಾಕಬೇಕಾಗುತ್ತದೆ. ಆದರೆ ಮೊದಲೇ ನಾಲ್ಕು ಇಂಚು ಕಾಂಕ್ರೀಟ್ ಹಾಕಲೇ ಇಲ್ಲ. ಕೇವಲ ಸಿಮೆಂಟ್ ಕಾಂಕ್ರೀಟ್‌ನ್ನು

ಹಾಕಿ ಅವ್ಯವಹಾರವನ್ನು ಮಾಡಿರುವ ಬಗ್ಗೆ ಎಸ್ಟಿಮೇಟ್‌ಗಳು ಮತ್ತು ನಮ್ಮ ಪುರಸಭೆಯ ಸದಸ್ಯರು ಜಿಲ್ಲಾಧಿಕಾರಿಗಳ ಹತ್ತಿರ ಹೋಗಿ ಭೇಟಿ ಮಾಡಿ ತಿಳಿಸಿದ್ದಾರೆ. ಇಂಜಿನಿಯರ್‌ಗಳ ಮುಖಾಂತರ ಇದನ್ನು ವಿಚಾರಣೆ ಮಾಡಿಸಲು ಅವರು ಹೇಳಿದ್ದಾರೆ. ಮಾನ್ಯ ಸಚಿವರನ್ನು ಭೇಟಿಯಾಗಿಯೂ ಸಹ ಇದರ ಬಗ್ಗೆ ಮಾಹಿತಿಯನ್ನು ನೀಡಿದ್ದಾರೆ. ಆದರೆ ಇಂಜಿನಿಯರ್‌ಗಳ ಮುಖಾಂತರ ತನಿಖೆಯನ್ನು ಏತಕ್ಕಾಗಿ ಮಾಡಿಸಿಲ್ಲ. ಈ ಅವ್ಯವಹಾರದಲ್ಲಿ ಲಕ್ಷಾನುಗಟ್ಟಲೆ ಅವ್ಯವಹಾರವನ್ನು ಮಾಡಿರುತ್ತಾರೆ, ಆದರೂ ಅವರ ಮೇಲೆ ಕ್ರಮವನ್ನು ಕೈಗೊಳ್ಳದ ಕಾರಣ ಆ ಅಧ್ಯಕ್ಷರು ಮತ್ತು ಪುರಸಭೆಯ ಮುಖ್ಯಾಧಿಕಾರಿಗಳು ಕೂಡಿ ತಮಗೆ ಯಾವ ಅಧಿಕಾರವಿಲ್ಲದೆ ಸರ್ಕಾರ ಏನು ಮಾಡುತ್ತದೆ ಎಂಬ ಭಾವನೆಯಿಂದ, ಬ್ಲಾಂಕ್ ಹಕ್ಕುಪತ್ರಗಳನ್ನು ಜನರಿಗೆ ಕೊಟ್ಟು ಮೋಸ ಮಾಡಿದ್ದಾರೆ. ಅವರಿಗೆ ಯಾವುದೇ ತರಹದ ಅಧಿಕಾರಗಳಿರುವುದಿಲ್ಲ, ಪುರಸಭೆಯ ಅಧ್ಯಕ್ಷರು ಹಾಗೂ ಪ್ರಭಾವಿ ಮುಖ್ಯಾಧಿಕಾರಿಗಳೂ ಸಹ ಸೇರಿ ಹಸ್ತಾಕ್ಷರವನ್ನು ಮಾಡಿ ಜನರಿಗೆ ಮೋಸ ಮಾಡಿದ್ದಾರೆ. ಇದನ್ನು ಮಾರಾಟ ಮಾಡಲು ತಮ್ಮ ಏಜೆಂಟರುಗಳಿಗೆ ಕೊಟ್ಟಿದ್ದಾರೆ, ಇವರು ವಿಚಾರಣೆಯನ್ನು ಮಾಡಿಲ್ಲದ ಕಾರಣ ಅವರಿಗೆ ಆ ರೀತಿಯ ಧೈರ್ಯ ಬಂದಿರುತ್ತದೆ. ಇವರು ಇದುವರೆವಿಗೂ ವಿಚಾರಣೆಯನ್ನು ಮಾಡಿಸಿಲ್ಲವೇಕೆ? ಇದರ ಬಗ್ಗೆ ನಾನು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಈ ಬ್ಲಾಂಕ್ ಹಕ್ಕುಪತ್ರಗಳನ್ನು ಕೊಟ್ಟಿರುವ ಬಗ್ಗೆ ನಾನು ಪತ್ರವನ್ನು ನೀಡಿದಾಗ ಅವರು ಜಿಲ್ಲಾಧಿಕಾರಿಗಳಿಗೆ ಆದೇಶವನ್ನು ನೀಡಿದ್ದಾರೆ. ಆದರೆ ಅದರ ಮೇಲೆ ಇದುವರೆವಿಗೂ ಯಾವುದೇ ಕ್ರಮವು ಜರುಗಿರುವುದಿಲ್ಲ. ಈ ಬ್ಲಾಂಕ್ ಹಕ್ಕುಪತ್ರಗಳನ್ನು ನಾನು ಮಾನ್ಯ ಮಂತ್ರಿಗಳಿಗೂ ಸಹ ಕೊಟ್ಟಿರುತ್ತೇನೆ, ಇದರ ಬಗ್ಗೆ ನಾನು ಸದನದಲ್ಲಿ ಚರ್ಚೆಯನ್ನು ಮಾಡುವುದರ ಬಗ್ಗೆ ಅವರು ಒಪ್ಪಿದ್ದಾರೆ. ಏಕೆಂದರೆ ಇವರು ಇಂಜಿನಿಯರಿಂಗ್ ವಿಭಾಗದವರಿಂದ ವಿಚಾರಣೆಯನ್ನು ಇದುವರೆವಿಗೂ ಮಾಡಿಸದಿರುವುದಕ್ಕೆ ಕಾರಣವೇನು?

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ : ಮಾನ್ಯ ಛೇರ್ಮನ್‌ರವರೆ, ನಾನು ಈಗಾಗಲೇ ಈ ವಿಷಯದ ಬಗ್ಗೆ ಮಾನ್ಯ ಸದಸ್ಯರಿಗೆ ತಿಳಿಸಿದ್ದೇನೆ. ವಿಭಾಗಾಧಿಕಾರಿಗಳಿಂದ ತನಿಖೆಯನ್ನು ನಡೆಸಿದ್ದೇನೆ, ತನಿಖೆಯಾದ ಪ್ರಕಾರ ಕ್ರಮವನ್ನು ಕೈಗೊಂಡಿದ್ದೇನೆ, ಅಲ್ಲಿ ಐಡಿಯಲ್ಸ್ ಸ್ಕೀಮ್ ಪ್ರಕಾರ ಕೆಲಸವನ್ನು ಮಾಡಬೇಕಾದರೆ ಜಿಲ್ಲಾಧಿಕಾರಿಗಳು ಅದಕ್ಕೆ ಅಧ್ಯಕ್ಷರಾಗಿದ್ದಾರೆ. ಅವರ ಮುಖಾಂತರ ಯಾವುದೇ ಕೆಲಸವನ್ನು ಮಾಡಬೇಕಾದರೆ ಟೆಂಡರನ್ನು ಕರೆದು ಕೆಲಸವನ್ನು ಮಾಡುತ್ತೇವೆ. ಅದರ ಬಗ್ಗೆ ಅವರು ಏನು ಹೇಳಿದ್ದಾರೆ ಅದಕ್ಕೆ ಸಂಬಂಧಪಟ್ಟಂತೆ ಪತ್ರವನ್ನು ಕೊಟ್ಟರೆ ಅಂತಹ ಅಧಿಕಾರಿಗಳ ಮೇಲೆ ಅಥವಾ ಬೇರೆ ಯಾರೇ ಆಗಿದ್ದರೂ ಅವರ ಮೇಲೆ ತಕ್ಷಣ ಕ್ರಮವನ್ನು ಕೈಗೊಳ್ಳುತ್ತೇವೆ. ಇಂತಹ ಪರಿಸ್ಥಿತಿಯಲ್ಲಿ ಅಂತಹ ಅಧಿಕಾರಿಗಳು ಮುಂದುವರಿಸುವುದಕ್ಕೆ ಅವಕಾಶವನ್ನು ಕೊಡುವುದಿಲ್ಲ. ಇವತ್ತು ಆಶ್ರಯ ಮನೆಗೆ ಸಂಬಂಧಿಸಿದಂತೆ ಪಟ್ಟಾ ಕೊಡುವುದಾಗಲಿ, ಕಾಂಕ್ರೀಟ್ ಹಾಕಿರುವಂತಹ ಕೆಲಸಗಳಲ್ಲಿ ಡೀಟೈಲ್ಸ್‌ನ್ನು ಕೊಟ್ಟರೆ ಪುನಃ ಎನ್‌ಕ್ವಯರಿಯನ್ನು ಮಾಡುತ್ತೇವೆ. ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಈ ಐಡಿಯಲ್ಸ್ ಸ್ಕೀಂನ್ನು ಯಾವುದೇ ಕಾರಣಕ್ಕೂ ಜಿಲ್ಲಾಧಿಕಾರಿಗಳ ಮುಖಾಂತರವೇ ಮಾಡಿಸುತ್ತೇವೆ. ಪುರಸಭೆಯವರು ಅದನ್ನು ಮಾಡತಕ್ಕದ್ದಲ್ಲ, ಅವರು ಪುರಸಭೆಯ ಸದಸ್ಯರಾಗಿರುತ್ತಾರೆಯೇ ವಿನಃ ಐಡಿಯಲ್ಸ್ ಸ್ಕೀಂನಲ್ಲಿ ಜಿಲ್ಲಾಧಿಕಾರಿಗಳ ಮುಖಾಂತರವೇ ಕೆಲಸವನ್ನು ಮಾಡಿಸುತ್ತೇನೆ.